# ಭಾರತೀಯಳಾದ ನೆದರ್ಲಂಡ್ ಮಹಿಳೆ

**ನೆದರ್ಲಂಡಿನ ಮರಿಯೋನ್ ಭಾರತದ ಅಭಿಲಾಷ್ ಕೈ ಹಿಡಿದಿದ್ದಾರೆ. ಬೆಂಗಳೂರಿನ ಕಗ್ಗದಾಸಪುರದಲ್ಲಿ ಕಳೆದ ಎಂಟು ವರ್ಷಗಳಿಂದ ವಾಸವಾಗಿರುವ ಈ ಜೋಡಿಗೆ ಇಬ್ಬರು ಮಕ್ಕಳು. ಆ ಮೂಲಕ ಭಾರತ-ನೆದರ್ಲಂಡ್ ಅನನ್ಯ ಸಂಬಂಧ ಬೆಳೆಸಿಕೊಂಡಿದೆ.**




ಅಭಿಲಾಷ್ ಪೂರ್ಣ ಸಿನ್ಹಾ-ಮರಿಯೋನ್ ಮಕ್ಕಳಾದ ಟ್ಯುಲಿಕಾ ಮತ್ತು ನಳಿನ್

ಭಾರತದೊಂದಿಗೆ ಅದರಲ್ಲೂ ಬೆಂಗಳೂರಿನೊಂದಿಗೆ ವಿದೇಶೀಯರ ಅನುಬಂಧ ಅನನ್ಯ. ನೆದರ್ಲಂಡಿನಿಂದ ಬೆಂಗಳೂರಿಗೆ ಕಳೆದ ಎಂಟು ವರ್ಷಗಳ ಹಿಂದೆ ಬಂದ ಮರಿಯೋನ್ ಹೀನಿಕೆ ಅವರಿಗೆ ಬೆಂಗಳೂರಿನೊಂದಿಗೆ ಔದ್ಯೋಗಿಕ ಸಂಬಂಧಕ್ಕಿಂತ ಹೆಚ್ಚಾಗಿ ಭಾವನಾತ್ಮಕ ಸಂಬಂಧ ಬೆಸೆದಿದೆ. ಇದಕ್ಕೆ ಕಾರಣ ಅವರು ಮದುವೆಯಾದದ್ದು ಭಾರತೀಯ ಮೂಲದ ಅಭಿಲಾಷ್ ಪೂರ್ಣ ಸಿನ್ಹಾ ಅವರನ್ನು.

ಅಭಿಲಾಷ್ ಅವರನ್ನು ಮರಿಯೋನ್ ಭೇಟಿಯಾದದ್ದು ಆಕಸ್ಮಿಕವಾಗಿಯೇ. ಈ ಭೇಟಿ ಪರಿಚಯ, ಸ್ನೇಹ, ಪ್ರಣಯವಾಗಿ ಮದುವೆಯಲ್ಲಿ ಅಂತ್ಯಗೊಂಡಿದೆ. ಹೀಗಾಗಿ ನೆದರ್ಲಂಡ್–ಭಾರತದೊಂದಿಗೆ ಭಾವನಾತ್ಮಕ ಅನುಬಂಧವನ್ನೂ ಬೆಸೆದಿದೆ. ಇದೀಗ ಮರಿಯೋನ್‌ಗೆ ಇಬ್ಬರು ಮಕ್ಕಳು. ಮಗಳು ಟ್ಯುಲಿಕಾಗೆ 9 ವರ್ಷ, ಮೂರನೇ ತರಗತಿ ಮತ್ತು ಮಗ ನಳಿನ್ ಸಿನ್ಹಾ ಏಳು ವರ್ಷ, ಒಂದನೇ ತರಗತಿಯಲ್ಲಿ ಕಲಿಯುತ್ತಿದ್ದಾನೆ.

'ನಾನು 2003 ರಲ್ಲಿ ಬೆಂಗಳೂರು ಮತ್ತು ಕೊಡೈಕೆನಾಲ್‌ಗೆ ಬಂದಿದ್ದೆ. ನನ್ನ ಡಚ್ ಗೆಳತಿಯೊಬ್ಬಳನ್ನು ಭೇಟಿಯಾಗುವುದಕ್ಕಾಗಿ ಬಂದು ಆಮೇಲೆ ವಾಪಸ್ ನೆದರ್ಲಂಡಿಗೇ ಹೋದೆ. ಅದಾಗಿ 2004ರಲ್ಲಿ ಉದ್ಯೋಗದ ನಿಮಿತ್ತ ಮತ್ತೆ ಬೆಂಗಳೂರಿಗೆ ಬಂದೆ. ಆಗ ನಾನು ಅಭಿಲಾಷ್ ಅವರನ್ನು ಭೇಟಿಯಾದೆ. ನಾವಿಬ್ಬರೂ ಬಹಳ ಆತ್ಮೀಯರಾದೆವು. ಆ ಆತ್ಮೀಯತೆ ಪ್ರೀತಿ ಪ್ರೇಮಕ್ಕೆ ತಿರುಗಿ 2005ರಲ್ಲಿ ನಾನು ಅಭಿಲಾಷ್ ಮದುವೆಯಾದೆವು. ಆ ಬಳಿಕ ನಾವು ನನ್ನ ಸ್ವಂತ ಊರು ನೆದರ್ಲಂಡಿಗೆ ಹೋದೆವು. ಅಲ್ಲೇ ನಮ್ಮ ಮೊದಲ ಮಗಳು ಟ್ಯುಲಿಕಾ ಹುಟ್ಟಿದ್ದು. 2006ರಲ್ಲಿ ನಾವು ಮತ್ತೆ ಬೆಂಗಳೂರಿಗೆ ಬಂದು ಇಲ್ಲೇ ನೆಲೆ ನಿಂತೆವು' ಎಂದು ತಮ್ಮ ಜೀವನದ ಮಹತ್ವದ ತಿರುವನ್ನು ಮೆಲುಕು ಹಾಕುತ್ತಾರೆ ಮರಿಯೋನ್.

ಮರಿಯೋನ್ ಬೆಂಗಳೂರಿನಲ್ಲಿ ಜರ್ಮನ್ ಭಾಷೆಯಿಂದ ಡಚ್ ಭಾಷೆಗೆ ಭಾಷಾಂತರ ತಜ್ಞೆಯಾಗಿ ಫ್ರೀಲಾನ್ಸ್ ಕೆಲಸ ಮಾಡುತ್ತಿದ್ದು ಸದ್ಯದಲ್ಲೇ ಬೇರೆ ಉದ್ಯೋಗ ಹಿಡಿಯುವ ಯೋಚನೆಯಲ್ಲಿದ್ದಾರಂತೆ. ಸಿ.ವಿ. ರಾಮನ್‌ನಗರ ಸಮೀಪದ ಕಗ್ಗದಾಸಪುರದಲ್ಲಿ ವಾಸ.

'ಸಾಮಾನ್ಯವಾಗಿ ಒಂದು ದೇಶ ಬಿಟ್ಟು ಹೊಸ ದೇಶಕ್ಕೆ ಹೋಗಿ ಅಲ್ಲೇ ನೆಲೆಯೂರುವುದು ಎಂದರೆ ಅದು ಸುಲಭದ ಮಾತಲ್ಲ. ಹೊಸ ಮನೆ, ಹೊಸ ಜಾಗ, ಹೊಸ ಸ್ನೇಹಿತರು, ಭಾಷೆ, ಜೀವನಶೈಲಿ, ಆಹಾರ ಪದ್ಧತಿ ಎಲ್ಲವೂ ವಿಭಿನ್ನವಾಗಿರುವಾಗ ಹೊಸ ಜಾಗಕ್ಕೆ ಸುಲಭವಾಗಿ ಹೊಂದಿಕೊಳ್ಳಲಾಗದು. ಆದರೆ ನಾನು ಬೆಂಗಳೂರಿಗೆ ಅತ್ಯಂತ ಬೇಗನೆ ಹೊಂದಿಕೊಂಡೆ' ಎನ್ನುತ್ತಾರೆ ಮರಿಯೋನ್.

ಅಭಿಲಾಷ್ ಭಾರತೀಯ ಆಗಿರುವುದರಿಂದ ಮಕ್ಕಳಿಗೆ ಎರಡೂ ದೇಶಗಳ ಸಂಸ್ಕೃತಿ, ಸಂಪ್ರದಾಯಗಳ ಅರಿವಿದೆ. ಇಲ್ಲಿನ ಮಕ್ಕಳೊಂದಿಗೆ ಬೇಗ ಬೆರೆಯಲಾರಂಭಿಸಿದ್ದಾರೆ. ಈಗ ಮಕ್ಕಳಿಗೆ ಬೆಂಗಳೂರೇ 'ಹೋಮ್‌ಟೌನ್' ಎನಿಸಿಬಿಟ್ಟಿದೆ ಎಂಬುದು ಮರಿಯೋನ್ ಅಭಿಪ್ರಾಯ.

### ತಂಪು ತಾಣಗಳು

'ದಕ್ಷಿಣ ಭಾರತದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದೇವೆ. ತಮಿಳುನಾಡು, ಮೈಸೂರು, ಕೊಡಗು, ನೀಲಗಿರಿ, ಕೊಡೈಕೆನಾಲ್, ಪಾಂಡಿಚೇರಿ ಮುಂತಾದ ಜಾಗಗಳನ್ನು ವೀಕ್ಷಿಸಿದ್ದೇವೆ. ನನಗೆ ಗಿರಿಧಾಮ (ಹಿಲ್ ಸ್ಟೇಷನ್ಸ್)ಗಳನ್ನು ನೋಡುವುದು ಬಹಳ ಇಷ್ಟ. ಕಾರಣ ಇದು ತಂಪಾದ ತಾಣ, ಸುಂದರ ಪ್ರಕೃತಿ, ರಮಣೀಯ ಜಾಗ' ಎಂದು ಹೇಳುತ್ತಾರೆ.

'ವಾರದ ಎಲ್ಲ ದಿನಗಳನ್ನೂ ಹೊರಗೇ ಕಳೆಯುವುದರಿಂದ ವಾರಾಂತ್ಯದಲ್ಲಿ ಮನೆಯಲ್ಲೇ ಇರುತ್ತೇವೆ. ಕೆಲವೊಮ್ಮೆ ಸ್ನೇಹಿತರನ್ನು ಭೇಟಿಯಾಗಲು ಹೋಗುತ್ತೇವೆ. ಮನೆಯಲ್ಲಿದ್ದು ಕುಕ್ಕೀಸ್, ಕಪ್ ಕೇಕ್‌ಗಳನ್ನು ತಯಾರಿಸುತ್ತೇವೆ. ಭಾರತೀಯ ಆಹಾರ ಪದ್ಧತಿ ನಮಗಿಷ್ಟ. ಮನೆಯಲ್ಲಿ ಬೆಳಗಿನ ಉಪಾಹಾರಕ್ಕೆ ಬ್ರೆಡ್ ತಿನ್ನುತ್ತೇವೆ, ಮಧ್ಯಾಹ್ನದ ಊಟಕ್ಕೆ ಚಪಾತಿ, ಸಬ್ಜಿ, ದಾಲ್ , ಅನ್ನ ತಿನ್ನುತ್ತೇವೆ. ಕೆಲವೊಮ್ಮೆ ದೋಸೆಯನ್ನೂ ಮಾಡುತ್ತೇವೆ. ನಮ್ಮ ಮನೆಯವರು ಬ್ರೆಡ್‌ಗೆ ಆಮ್ಲೆಟ್ ಅಥವಾ ಎಗ್‌ಬುರ್ಜಿ ಮಾಡುತ್ತಾರೆ. ಇದು ಬಹಳ ರುಚಿಯಾಗಿರುತ್ತದೆ. ಕನ್ನಡ ಭಾಷೆ ಕಲಿತಿಲ್ಲ. ಆದರೆ ಕಲಿಯಬೇಕು ಎಂಬ ಆಸೆ ಇದೆ. ಕಲಿಯಲು ಹೆಚ್ಚಿನ ಸಮಯ, ಏಕಾಗ್ರತೆ ಬೇಕು. ಅದನ್ನು ಸದ್ಯಕ್ಕೆ ಕೊಡಲಾಗುತ್ತಿಲ್ಲ. ಇಲ್ಲಿ ಕ್ರಿಸ್‌ಮಸ್ ಮತ್ತು ಈಸ್ಟರ್‌ಗಳನ್ನು ಆಚರಿಸುತ್ತೇವೆ. ದೀಪಾವಳಿಯನ್ನೂ ಆಚರಿಸುತ್ತೇವೆ. ಮಕ್ಕಳಿಗೆ ಹೋಳಿ ಹಬ್ಬದ ದಿನ ಬಣ್ಣದ ಆಟ ಆಡುವುದು ಬಹಳ ಇಷ್ಟ' ಎಂದು ತಮ್ಮ ಆಸಕ್ತಿಯ ವಿವರ ನೀಡುತ್ತಾರೆ ಇವರು.

★ **ಅವನೀಶ್**